dc-139
T-P-24

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 127 | ಮಂಗಳವಾರ 15—1—46 | ಬಿಡಿ ಪ್ರತಿ 6 ಪೈ

ಮಹಾತ್ಮ ಗಾಂಧೀಯವರ ದಿವ್ಯವಾಣಿ

ಭಗವಂತನ ದಯ ವಿನಃ ಜೀವ ಹೊರ ದುಃಖದಿಂದಲೂ ನಾವು ಜೀವನ ಲೇಖನವುದಿಲ್ಲ. ನಿರ್ಭಯನಾಗಿರಬೇಕೆಂದು ಭಗವದ್ಗೀತೆಯು ಘೋಷಿಸುತ್ತದೆ. ಅದನ್ನು ಕಲಿತಲ್ಲಿ ಯಾರೂ ನಿನ್ನನ್ನು ಅಣಗಿಸಲಾರರು. ನಾನು ಮುಂದುಕ್ಕೆ; ಯಾಂತಾದರೂ ನನ್ನನ್ನು ಕತ್ತು ಹಿಡಿದು ತಳ್ಳಿಬಹುದು; ಬೀಳಿಸಬಹುದು. ಆದರೆ ಯಾಂತಾದರೂ ನನ್ನನ್ನ ತಲೆಬಾಗಿಸುವಂತೆ ಹೇಳಿದರೆ ಆಗುವುದಿಲ್ಲವೆನ್ನುವೆನು. ಆಗ ಆತನು ತಕ್ಷಣವಾಗಿ ಏನು ಮಾಡಬಲ್ಲನೆಂದರೆ ನಾಶಮಾಡುವುದು. ಈ ನಿರ್ಭಯತ್ವವೇ ಸ್ವರಾಜ್ಯ. ಪ್ರತಿಯೊಬ್ಬರಿಗೂ ಈ ರೀತಿಯಲ್ಲಿ ಅರಿತು ಇದರಂತೆ ವ್ಯವಹರಿಸಿದ್ದಲ್ಲಿ ಸ್ವರಾಜ್ಯವು ಲಭಿಸಿತೆಂದೇ ಹೇಳಬೇಕು. ಆದರೆ ಹೀಗೆ ಹೇಳಿದೆಂದರೆ ಸರ್ಕಾರವನ್ನು ಹೋಗುವುದೆಂದರ್ಥವಲ್ಲ. ಯಾವ ಅಧಿಕಾರವಾದರೂ ತಮ್ಮನ್ನು ತಲೆಬಾಗುವಂತೆ ಮಾಡಲಾರದೆಂಬುದೇ ಅದರ ಅರ್ಥ. 'ಸಂಪೂರ್ಣ ಸ್ವಾತಂತ್ರ್ಯತೆ' ಎಂದು ಗಳಿಯುತ್ತಿರುವುದರಿಂದ ನಮಗೆ ಸ್ವರಾಜ್ಯವು ಕಳಚಿಕೊಂಡು ಬೀಳುವುದಿಲ್ಲ. ಮಾತಿನೊಂದಿಗೆ ಕೃತಿಯೂ ಇರಬೇಕು. ——— ನನ್ನೊಂದಿಗಿರಲಿಕ್ಕು ಪ್ರಾರ್ಥನೆಗಳನ್ನು ಮಾಡಿ.

ಂ ಂ

ಧನುರ್ಮಾಸ ಪೂಜಾ

ಮೈಸೂರು ಸಿಟಿ ಕೃಷ್ಣಮೂರ್ತಿಪುರದಲ್ಲಿರುವ, ಮನೆ ನಂ. 1333 ಶ್ರೀರಾಮ ನಿಲಯದಲ್ಲಿ ಇದೇ ತಾ॥ 28 ನೇ ಭಾನುವಾರ ಪ್ರಾತಃಕಾಲ 9 ಘಂಟೆಗೆ ಧನುರ್ಮಾಸ ಪೂಜಾ ಮಹಾ ಮಂಗಳಾರತಿ ನಡೆಯುವುದು. ಭಕ್ತಾದಿಗಳು ಪಾಲ್ಗೊಳ್ಳಬೇಕೆಂದು ಶ್ರೀರಾಮಾಯಣಾಸಕ್ತರು ಕೋರುತ್ತಾರೆ.

ಂ ಂ

ಆರಂಭೋತ್ಸವ

ಮೊನ್ನೆಯ ದಿವಸ ಸಂಜೆ ಮೈಸೂರಿನ ವೈಶ್ಯಾಯ ರಸ್ತೆಯಲ್ಲಿ ಆರ್ಯವೈಶ್ಯ ಸಮಿತಿಯ ಬೆಳಕು ಪತ್ರಿಕೆಯ ಕಛೇರಿಯನ್ನು ಶ್ರೀ ಅಗರಂರವರ ಅಧ್ಯಕ್ಷತೆಯಲ್ಲಿ ಆರಂಭಿಸಲಾಯಿತು. ರಾಜಧಾನಿಯ ಮುಖ್ಯಸಿದ್ಧ ಪತ್ರಿಕೋದ್ಯೋಗಿಗಳೂ, ಕಲಾಕೂಟದ ಕಾರ್ಯದರ್ಶಿಯವರೂ ಆದ ಶ್ರೀಮಾನ್ ನಂಜನಗೂಡು ಶ್ರೀಕಂಠಯ್ಯನವರು ಬೆಳಕು ಪತ್ರಿಕೆಯ ಅಭ್ಯುದಯಕ್ಕೆ ಅತ್ಯುತ್ಸಾಹ ಸಲಹೆಗಳನ್ನಿತ್ತರು.

ರೂ. 100 ಕ್ಕೆ ಮೇಲ್ಪಟ್ಟ ಎಲ್ಲ ನೋಟುಗಳ ರದ್ದು

ಕಾಳ ಸಂತೆ ಮತ್ತು ಲಾಭ ಬಡಕತನ ಮಟ್ಟಿ ಹಾಕಲು ಹೊಸ ಕಾನೂನು !

ನವದೆಹಲಿ, ಜ 12 — ಇನ್ನು ಮುಂದೆ ರೂ. 500 ರೂ. 1000 ಮತ್ತು ರೂ. 10000 ದ ನೋಟುಗಳ ಚಲಾವಣೆ ರದ್ದು ಮಾಡಲಾಗಿದೆಯೆಂದು ಭಾರತ ಸರ್ಕಾರದ ಆಜ್ಞೆಯಾಗಿದೆ. ಬ್ಯಾಂಕಿನ ಮತ್ತು ಟ್ರೆಜರಿಗಳು ತಮ್ಮಲ್ಲಿರುವ ರೂ. 100 ಕ್ಕೆ ಮೇಲ್ಪಟ್ಟ ನೋಟುಗಳನ್ನು ತಿಳಿಸಬೇಕೆಂದೂ ಆಜ್ಞೆಯಾಗಿದೆ. ಇದರಿಂದ ಕಾಳ ಸಂತೆ ಮತ್ತು ಲಂಚಬಡಕರ ಆಟ ಕಡಿವೆಯಾಗಬೇಕಂತೆ.

ಬೆಂಗಳೂರು ಜ 12— ನೀರಾವರಿ ಕಾರ್ಯಾನುಕೂಲಕ್ಕಾಗಿ ರೈತರ ಸಹಾಯದ ಬಗ್ಗೆ ಚಿತ್ರದುರ್ಗ ಮತ್ತು ಗೋರಿಬಿದನೂರು ತಾಲ್ಲೂಕುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಯೋಜನೆಯನ್ನು ಸರ್ಕಾರದವರು ಕೈಗೊಂಡಿರುತ್ತಾರೆ. ಇದರಿಂದ 40 ಕ್ಕೆ ಮೇಲ್ಪಟ್ಟ ಐಗೇಷನ್ ಪಂಪುಗಳಿಂದ ಭೂಮಿ ಸಂದ್ರ ಕೆರೆ ಕೆಳಗಿನ ಅಡಿಕೆ ತೋಟಗಳಿಗೆ ನೀರು ಒದಗಿಸಲಾಗುತ್ತೆ. ಬೇರೆಬೇರೆ ಜಿಲ್ಲೆಗಳಿಗೆ ಉಪಯೋಗಿಸಲು 100 ಐರಿಗೇಷನ್ ಪಂಪುಗಳು ವಿದ್ಯುಚ್ಛಕ್ತಿಯೊಡನೆ ಸರಬರಾಜು ಮಾಡಲಾಗುವುದು.— ಎಂಬದಾಗಿ ಸರಕಾರದ ಪಬ್ಲಿಸಿಟಿ ಆಫೀಸರು ಪ್ರಕಟಿಸಿರುವ ಪ್ರೆಸ್ ನೋಟು ತಿಳಿಸುತ್ತದೆ.

ಜರೂಸೆಲಂ ಜ 12— ಅರಬರು ತಮ್ಮ ಸಾಮಗ್ರಿಗಳನ್ನು ಒಹಿಷ್ಕರಿಸುವ ನಿರ್ಧಾರಕ್ಕೆ ಪ್ರತೀಕಾರವಾಗಿ ಸ್ಪೇನಿನ ಯಹೂದ್ಯರು ಇದೇ ರೀತಿಯಲ್ಲಿ ಅರಬರ ಸಾಮಗ್ರಿಗಳನ್ನು ಬಹಿಷ್ಕರಿಸಲು ನಿರ್ಧರಿಸಿದ್ದಾರೆ.

ಹರಾಜು — ಹರಾಜು — ಹರಾಜು

ಸಯ್ಯಾಜಿರಾವ್ ರೋಡ್ ನ್ಯೂ ವೆಂಕಟೇಶ ಭವನದ ಹತ್ತಿರ

ಉತ್ತಮ ಫರ್ನಿಚರುಗಳೂ, ಗೃಹದ ಸಾಮಾನುಗಳೂ, ಮತ್ತು ಅನೇಕ ಫ್ಯಾನ್ಸಿ ವಸ್ತುಗಳಿಂದ ಸೆಂಟ್ರಲ್ ಆಕ್ಷನೀರಿಂಗ್ ಹಾಲ್ (ಬ್ರಾಂಚ್) ನವೀಂದ ಬಹಿರಂಗ ಹರಾಜಿನಲ್ಲಿ ಮಾರಲ್ಪಡುತ್ತವೆ.

.... ತಾರೀಖು ಮುಂತಾದ ವಿವರಗಳನ್ನು ಗಮನಿಸಿ ....

THE CENTRAL AUCTION HALL (Branch)
Near New Venkatesh Bhavan
Sayyaji Rao Road Mysore

ಬಾಡಿಗೆದಾರರ ಮೇಲಿನ ಅರ್ಜಿ ವಜಾ

ಮೈಸೂರಿನ ಸುಣ್ಣದ ಕೇರಿಯಲ್ಲಿರುವ ಶ್ರೀ ಕೆಂಪಮ್ಮ ಉರುಫ್ ಪಾಪಮ್ಮ ಎಂಬಾಕೆಯು ಶ್ರೀ ಕೆಂಪಯ್ಯನೆಂಬವರಿಗೆ ಮಳಿಗೆಯನ್ನು ಬಾಡಿಗೆ ಕೊಟ್ಟಿರುವ ವಿಷಯದಲ್ಲಿ ಡೆ ॥ ಕ ॥ ಕೋರ್ಟಿನಲ್ಲಿ ಅರ್ಜಿ ಹಾಕಿಕೊಂಡು ಸದರೀ ಕೆಂಪಯ್ಯನವರು ಸರಿಯಾಗಿ ಬಾಡಿಗೆ ಕೊಡುತ್ತಿಲ್ಲವೆಂತೂ, ಮನೆಯನ್ನು ತಮ್ಮ ಸುಪರ್ದಿಗೆ ಕೊಡಿಸಬೇಕೆಂದು ಹಾಕಿಕೊಂಡಿದ್ದ ಅರ್ಜಿಯನ್ನು ವಜಾ ಮಾಡಿರುವರು.

ಜಾತಿ ನಿರೋಧಕ್ಕಾಗಿ

ಟೋಕಿಯೋ, ಜ 12 — ಭಾರತೀಯನಾಗಿ ಜನಿಸಿ, ಕೆನೆಡಿಯನ್ ಪೆಸಿಫಿಕ್ ರೈಲ್ವೆಯಲ್ಲಿ ಕೆಲಸ ಮಾಡಿದ ಸೆಕ್ವಾಕರ್ ತನ್ನ ಆಸ್ತಿಯಲ್ಲಿ ಅರ್ಧವನ್ನು ಸುಮಾರು 1 ಕೋಟಿ 1 ಲಕ್ಷ ರೂ ಆರನ್ನು ಭಾರತದಲ್ಲಿ ಜಾತಿ ಪದ್ಧತಿ ನಿವಾರಣಾಗಲು ಉಪಯೋಗಿಸುವಂತೆ ಉಯಿಲು ಬರೆದಿದ್ದಾನೆ.

ನಷ್ಟ ಪರಿಹಾರಕ್ಕಾಗಿ

ನವದೆಹಲಿ, ಜ 12 — ಜಪಾನಿನಿಂದ ಬರುವ ನಷ್ಟ ಪರಿಹಾರದಲ್ಲಿ ಭಾರತಕ್ಕೆ ಶೇ 2 ಇಡಲಾಗಿದೆ.

ಮಂತ್ರಿ ಮಂಡಲದಲ್ಲಿ ಹಕ್ಕಿವಿಲ್ಲ

ಜಪಾನಿ ಮಂತ್ರಿಮಂಡಲದಲ್ಲಿರುವ 60 ವರ್ಷಕ್ಕೆ ಮೇಲ್ಪಟ್ಟವರೆಲ್ಲರೂ ಯಾವ ಪಕ್ಷಕ್ಕೂ ಸೇರಿದವರಲ್ಲ.

ಮಹೋತ್ಸವಾರಂಭ

ಬೆಂಗಳೂರು, ಡಿ 12 — ನಿನ್ನೆಯ ದಿವಸ ಸಚಿವರಾದ ಶ್ರೀ ಪುಲ್ಲರೆಡ್ಡಿಯವರು ತ್ಯಾಗ ಬ್ರಹ್ಮ ಮಹೋತ್ಸವವನ್ನು ಪ್ರಾರಂಭಿಸಿ ತ್ಯಾಗರಾಜ ಕಥನ ವಿವರಣೆ ಮಾಡಿದರು.

ಗಾಂಧೀಜೀ ಭೇಟಿಗೆ ಕಾತುರ

ಭೂಪಾಲ ನವಾಬರು ಗಾಂಧೀಜೀಯವರನ್ನು ತಮ್ಮ ಸಂಸ್ಥಾನಕ್ಕೆ ಭೇಟಿ ಕೊಡಬೇಕೆಂದು ಕೋರಿರುವರೆಂದೂ, ಗಾಂಧೀಜೀರವರು ಬರಲಾಗದಿದ್ದರೆ ನವಾಬರೆ ಗಾಂಧೀಜೀಯವರನ್ನು ನವದೆಹಲಿಯಲ್ಲಿ ನೋಡುವರೆಂದೂ ಹೇಳಲಾಗಿದೆ.

ಪತ್ರಿಕೆಗಳ ಪ್ರಾರಂಭ

ಕಟಕ್, ಜ 11 — ಪ್ರೆಸ್ ಕೆಲಸಗಾರರು ಮುಷ್ಕರ ಹೂಡಿದ್ದಾರೆ. ನಾಲ್ಕು ದಿನ ಪತ್ರಿಕೆಯು ಹೊರಬಿದ.

ಅಲಹಾಬಾದ್ ಜ 8— ಮೌಲಾನಾಅಬ್ದುಲ್ ಕಲಾಂ ಆಜಾದರಿಗೆ ಲಂಡನಿನಿಂದ ಭಾರತ ಮಂತ್ರಿಗಳು ವರ್ತಮಾನ ಕಳುಹಿಸಿ, ಮೌಲಾನಾರವರನ್ನೊಡನೆ ಪಾರ್ಲಿಮೆಂಟರಿ ರಾಯಭಾರವು ಖುದ್ದಾಗಿ ಸೇರಬೇಕೆಂದು ಇಚ್ಛಿಸಿರುವುದಾಗಿ ತಿಳಿಸಿರುವರು.

ಲಂಡನ್ ಜ 8— ಹೈದರಾಬಾದಿಗೆ ಕೋಕಿನಾಡಾ ರೇವನ್ನು ಬಿಟ್ಟುಕೊಳ್ಳುವ ಪ್ರಯತ್ನ ನಡೆಯುತ್ತಿರುವದೆಂದು ವರ್ತಮಾನ.

ಲಂಡನ್ ಜ 8— ಟರ್ಕಿ ರಷ್ಯಾವಿಗೆ ಹೊಡೆದಾಟವೆಂದು ಫ್ರೆಂಚ್ ಪತ್ರಿಕೆಯು ಬರೆಹ ಸುಳ್ಳೆಂದು ರಷ್ಯಾದವರು ಖಂಡಿಸಿರುವರು.

ಲಂಡನ್ ಜ 7 — ರಷ್ಯಾದವರು ತಾವು ಹಿಡಿದ ಜರ್ಮನ್ ರಸಾಯನ ಶಾಸ್ತ್ರಜ್ಞರ ಸಹಾಯದಿಂದ ತಯಾರಿಸುತ್ತಿರುವ ಹೊಸರೀತಿಯ ಆಟಂ ಬಾಂಬು ಇಂಗ್ಲಿಷ್ ಅಮೇರಿಕಾ ತಯಾರಿಗಿಂತ ಬಹು ಮುಂದುವರಿದಿರುವುದೆಂದು ಹೇಳಲಾಗಿದೆ.

ಲಂಡನ್, ಜ 9 ಪ್ರಸಂಜದ ಅತ್ಯಂತ ಪ್ರಖ್ಯಾತ ಕ್ರಿಕೆಟ್ ಆಟಗಾರ ಡಾನ್ ಬ್ರಾಡ್ಮನ್ ಪಾಯು ಯಾತನೆಯಿಂದ ನರಳುತ್ತಿದ್ದು ಆಟದಿಂದ ತಾತ್ಕಾಲಿಕ ನಿವೃತ್ತನಾಗಿದ್ದವನು, ಮತ್ತೆ ಈಗ ಆಟದಲ್ಲಿ ಭಾಗವಹಿಸಲು ಬಂದಿರುವನು.

ಹಂಗಳೂರು ಜ 5 — ಕೋಲಾರದ ನಾಲ್ಕು ಭಂಗಾರ ಗಣಿಗಳ ಸುಮಾರು ಇಸ್ಪತ್ತು ಸಾವಿರಕ್ಕೆ ಮೇಲ್ಪಟ್ಟು ಕೆಲಸಗಾರರು ಮುಷ್ಕರವನ್ನು ಹೂಡಿರುವುದಾಗಿ ತಿಳಿಯಬಂದಿದೆ.

ಲಂಡನ್ ಜ 7 — ಯುದ್ಧಕಾಲದಲ್ಲಿ ಆಜಾದ್ ಹಿಂದ್ ಸರ್ಕಾರದ ನಾಯಕರಾಗಿದ್ದ ಶ್ರೀ ಸುಭಾಷರು ರಷ್ಯಾದಲ್ಲಿರುವರೆಂಬುದು ಒಂದು ಹುಚ್ಚು ಕಟ್ಟುಕತೆ ಎಂದು ಸ್ವವಾಡ ಪತ್ರಿಕೆಯಲ್ಲಿ ರಷ್ಯಾ ಪತ್ರಿಕೋದ್ಯೋಗಿ ಡೆವಿಚ್ ಜಾಸೆಲೆವ್‌ಸ್ಕ್ಯರವರು ಕ್ರೋಧದಿಂದ ಬರೆದಿರುವರು.

ಮದರಾಸು, ಜ 7 — ಕಕ್ಸಿಗಾರನೊಬ್ಬನ ಸುಮಾರು 22 ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡ ಆಪಾದನೆ ಮೇಲೆ ರೋಕಿನಾಡು ಅಡ್ವೊಕೇಟ್ ಸೋನುಯಾಜಲುಯೆಂಬುನರು ವಕೀಲುತನ ನಡೆಸದಂತೆ ಹೈಕೋರ್ಟಿನ ಆಜ್ಞೆಯಾಗಿದೆ.

ನವದೆಹಲಿ, ಜ 7 — ನರೇಂದ್ರ ಮಂಡಲಿಯ ಮಂತ್ರಿಗಳ ಸಮಿತಿಯು ಸಭೆ ನಡೆಯಿಸು.

ಪೂನಾ, ಜ 7 — ಹಿಂದೂ ಮಹಾಸಭೆಯ ಹಂಗಾಮಿ ಅಧ್ಯಕ್ಷರಾದ ಶ್ರೀ ಭೂಪಟ್ಕರರು ದೇಶದ ಎಲ್ಲಾ ಹಿಂದೂ ಮಹಾಸಭೆಗಳೂ ಜನವರಿ ತಾ|| 23 ರಲ್ಲಿ ಶ್ರೀ ಸುಭಾಷ್‌ಚಂದ್ರಬೋಸರ ಜನ್ಮೋತ್ಸವವನ್ನಾಚರಿಸಬೇಕೆಂದು ಕೋರಿರುವರು.

ಬಂಕರ್‌ಗಾಚಾ ಕ್ಯಾಂಪಿನಲ್ಲಿರುವ ಭಾರತ ರಾಷ್ಟ್ರೀಯ ಸೇನೆಯು ತ್ರಿವರ್ಣ ಧ್ವಜಾರೋಹಣೆಯು ನಿರ್ಬಂಧಿಸಲ್ಪಟ್ಟ ಪ್ರಯುಕ್ತ ಅನ್ನ ಮುಷ್ಕರ ಕೈಗೊಂಡಿರುವುದಾಗಿ ತಿಳಿಯಬಂದಿದೆ.

ಮದರಾಸು ಜ 10 — ಭಾರತದ ರಿಜರ್ವ್ ಬ್ಯಾಂಕಿನವರು ಪ್ರಕಟಿಸಿರುವ ಪಟ್ಟಿಯಂತೆ ನಾಲ್ಕನೇ ಜನವರಿಯಲ್ಲಿ ರೂ. 12268012000 ನೋಟುಗಳು ಚಲಾವಣೆಗೆ ಒಂದಿರುವುನೆಂದು ವರ್ಷದ ಹಿಂದೆ ರೂ. 10304622000 ಇದ್ದಿತೆಂದು ಪ್ರಕಟವಾಗಿದೆ. ಅಂದರೆ 197 ಕೋಟಿ ರೂ ನೋಟು ಚಲಾವಣೆ ಹೆಚ್ಚಿದೆ.

ಗಾಜೀಪುರದ ಪೌರಸಭಾ ಚುನಾವಣೆಯಲ್ಲಿ ಮೂವರು ಕಾಂಗ್ರೆಸಿನ ಉಮೇದುವಾರರೂ ತಮ್ಮ ಠೇವಣಿಯನ್ನು ಕಳೆದುಕೊಂಡರು (ಬಿ)

ಗ್ರೀಸಿನ ಸರ್ಕಾರದವರು ನುಷ್ಕರಮಾಡುತ್ತೆನೆಂದು ಹೆದರಿಸುತ್ತಿರುವ ತಮ್ಮ ಅಧಿಕಾರಿಗಳು ಮತ್ತು ನೌಕರರಿಗೆ ಉಚಿತವಾಗಿ ಒಟ್ಟೆ ಒದಗಿಸಲು ಮೂರು ಮಿಲಿಯ ಸ್ಪೌಂಡು ಸೂಲು ಮತ್ತು ಒಟ್ಟೆಯನ್ನು 15000 ಸಿದ್ಧವಾದ ಉಡುಪನ್ನು ಇಟ್ಟಿದ್ದಾರೆ

ಅಮೇರಿಕಾದಲ್ಲಿ ಮುಷ್ಕರ

ನ್ಯೂ ಯಾರ್ಕ್ ಜ 8— ಇಲ್ಲಿಯ ಡೆಸ್ಪರ್ಡ್ ಯೂನಿಯರ್ ಕೇಬಲ್ ಕಂಪೆನಿಯ 70 ಸಾವಿರ ಮಂದಿ ಕೆಲಸಗಾರರು ಮುಷ್ಕರ ಹಿಡಿದಿರುವುದರಿಂದ ನ್ಯೂಯಾರ್ಕಿಗೂ ಪ್ರಪಂಚದ ಇತರ ಕಡೆಗಳಿಗೂ ಟೆಲಿಗ್ರಾಫ್ ವ್ಯವಹಾರ ಬಂದಾಗಿದೆ ಟೆಲಿಫೋನಿನ ಸ್ಥಿತಿಯೂ ಹೀಗಾಗಬಹುದೆಂಬ ಶಂಕೆ ಇದೆ.

ಸಯಾಮಿನಲ್ಲಿ ಜಪಾನಿಗಳೆಲ್ಲ ನಿರಸ್ತ್ರರಾದರು

ಅಲ್ಲೈಸೀ ಕೇಂದ್ರ, ಜ 2 — ಸಯಾಮಿನಲ್ಲಿ ಜಪಾನಿಗಳ ನಿಶಸ್ತ್ರೀಕರಣ ಕಾರ್ಯ ಪೂರ್ತಿಯಾಯಿತು ಇನ್ನು 600 ಮಂದಿ ಮಾತ್ರ ಉಳಿದಿದ್ದಾರೆ 2 ನೆ ಭಾರತ ದಳಕ್ಕೆ ಶರಣಾಗತರಾದ ಜಪಾನಿಗಳು 112630 ಆಯುಧಗಳನ್ನು ಒಪ್ಪಿಸಿಕೊಟ್ಟಿದ್ದಾರೆ ಈಗ 4512 ಜಪಾನಿ ಕತ್ತಿಗಳನ್ನು ಮಿತ್ರ ಪಡೆಯ ಅಧಿಕಾರಿಗಳಿಗೆ ಬಹುಮಾನವಾಗಿ ಹಂಚಲಾಗಿದೆ (ಐ ಪಿ)

ಶ್ರೀಮಸ್ಕಹೆರಾಜರವರು ಚಿಂತಾಮಣಿಗೆ ಅನಿರೀಕ್ಷಿತ ಭೇಟಿಯಿತ್ತು ಪ್ರಜಾ ಪರಿಸ್ಥಿತಿಯನ್ನು ಖುದ್ದು ವಿಚಾರ ಮಾಡಿದರು.

ಟಾಗೂರ್ ಉಪನ್ಯಾಸ ಮಾಲೆ

ಐರ್ಲಂಡಿನ ರಾಷ್ಟ್ರೀಯ ವಿಶ್ವವಿದ್ಯಾನಿಲಯದಲ್ಲಿ ಭಾರತ ಕಲೆಯ ಟಾಗೂರು ಉಪನ್ಯಾಸದ ಏರ್ಪಾಡು ಆಗುತ್ತಿದೆ

ಟೋಜೋ ಮೊಕದ್ದಮೆ ಸಿದ್ಧತೆ

ಲಂಡನ್, ಜ 6.— ಟೋಕಿಯೊದಲ್ಲಿನ ಮೆಕ್ಆರ್ಥರವರ ಕಛೇರಿ ಅಧಿಕಾರಿಯೊಬ್ಬರು ತಿಳಿಸಿರುವಂತೆ ಟೋಜೋ ಮೇಲಿನ ಮೊಕದ್ದಮೆಯ ವಿಷಯ ಸಿದ್ಧಪಡಿಸಲಾಗಿದೆ

ಮಾರ್ಚಿ ತಿಂಗಳಲ್ಲಿ ಭಾರತಕ್ಕೆ ಭಾರತ ಕಾರ್ಯದರ್ಶಿ ಪೆಥಿಕ್ಲಾರನ್ಸರು ಭೇಟಿ ಕೊಡಬಹುದಾಗಿ ತಿಳಿಯಬಂದಿದೆ.

ಅಣು ಶಕ್ತಿಯ ಬಗ್ಗೆ ಒಪ್ಪಂದ ಭಿನ್ನಾಭಿಪ್ರಾಯವಿಲ್ಲ

ಅಣು ಶಕ್ತಿಯ ನಿರ್ಣಯದ ಬಗೆ ಜಗತ್ತುರ್ಮಹಾ ರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯವೇನೂಯಿಲ್ಲವೆಂದೂ ಆ ಒಗ್ಗೆ ಒಪ್ಪಂದವಾಗಿರುವುದಾಗಿಯೂ ಅಮೇರಿಕಾ ಕಾರ್ಯದರ್ಶಿ ಬೈರನ್ಸರು ಹೇಳಿದ್ದಾರೆ.

ಸೈನಿಕರ ನಿವೃತ್ತಿ

ನವದೆಹಲಿ— ಕಳೆದ ನವೆಂಬರು ಮೊದಲಿನಲ್ಲಿ ಸುಮಾರು 85000 ಸೈನಿಕರು ಮತ್ತು ಸ್ತ್ರೀಯರು ಸೈನ್ಯದಿಂದ ನಿವೃತ್ತರಾದರು. ತಿಂಗಳ ಕೊನೆಯಲ್ಲಿ ಒಟ್ಟು 167000 ಜನ ಬಿಡುಗಡೆಯಾದರು.

ಯಹೂದಿಗಳ ಸಮಸ್ಯೆ

ವಾಷಿಂಗ್ಟನ್ ಡಿ 9— ಪ್ಯಾಲಿಸ್ಟೈನಿನಲ್ಲಿ ಕಡೇಪಕ್ಷ 45 ಮಿಲಿಯ ಡಾಲರುಗಳಷ್ಟು ಖಾಸಗಿ ಬಂಡವಾಳ ಉಪಯೋಗಿಸಲಾಗುತ್ತಿದೆಯೆಂದೂ, 110 ಮಿಲಿಯ ಡಾಲರುಗಳಷ್ಟು ಅಮೇರಿಕಾ ಯಹೂದಿಗಳಿಂದ ದಾನವಾಗಿ ಕಳುಹಿಸಲಾಗಿದೆಯೆಂಬೂ ವಿಚಾರಣಾ ಸಮಿತಿಯ ಮುಂದೆ ಹೇಳಲಾಗಿದೆ.

ಲಾಟೀ ಛಾರ್ಜ್

ಕಲ್ಕತ್ತಾ ಜ 9—ಕೇಶವರಾಂ ಹತ್ತಿ ಗಿರಣಿಯ ಮುಂದೆ ಪಿಕೆಟ್ ಮಾಡುತ್ತಿದ್ದವರ ಮೇಲೆ ಪೋಲೀಸರು ಲಾಟೀ ಛಾರ್ಜ್ ಮಾಡಿದರೆಂದೂ ಆರು ಮಂದಿ ಗಂಡಸರಿಗೂ ಇಬ್ಬರು ಹೆಂಗಸರಿಗೂ ಗಾಯವಾಗಿದೆಯೆಂದೂ ತಿಳಿಯು ಬಂದಿದೆ:

ವೈಸರಾಯರಿಗೆ ಸನ್ಮಾನ

ಅಹಮದಾಬಾದ್ ಜ 8— ವೈಸರಾಯರು ಡೆಲ್ಲಿಯಿಂದ ವಿಮಾನದಲ್ಲಿ ಬಂದು ಇಲ್ಲಿನ ಚಾರಿತಾರ್ಥವಾದ ಸ್ಥಳಗಳಿಗೆ ಭೇಟಿ ಕೊಟ್ಟರೆಂದೂ, ಐನೂರು ವರ್ಷದ ಪುರಾತನವಾದ ಭದ್ರಾ ಕೋಟೆಯ ಭದ್ರಾದೇವಾಲಯಕ್ಕೆ ಹೋಗಿದ್ದರೆಂದೂ ಆಗ ಅಲ್ಲಿಯ ಮಹಂತರು ವೈಸರಾಯರಿಗೆ ಕೂತುಕೊಳ್ಳಲು ಬೆಳ್ಳಿಯ ಸಿಂಹಾಸನವನ್ನು ಕೊಟ್ಟು ಹಾರ ಹಾಕಿದರೆಂದೂ ತಿಳಿಯಬಂದಿದೆ.

ದಿನಾಚರಣೆ

ಸಿಂಗಪುರ— ಈಡಿಗೆ ಇಲ್ಲಿ ಆಜಾದ್-ಹೀಂದ್-ದಿನಾಚರಣೆಯು ವೈಭವದಿಂದ ನಡೆಸಲಾಯಿತು. ಈ ಸಂದರ್ಭದಲ್ಲಿ 3 ಮಂದಿ ಭಾರತೀಯರು ದಸ್ತಗಿರಿ ಮಾಡಲ್ಪಟ್ಟು ಜೈಲಲ್ಪಟ್ಟರು.

—ನವದೆಹಲಿ ಜ 9— ವಾಯು ಶಕ್ತಿಯ ಮುಂದಿನ ಕಾಂಗ್ರೆಸ್ ಅಧಿವೇಶನವು ಡೆಲ್ಲಿಯಲ್ಲಿ ನಡೆಯಲಾರದೆಂದು ಹೇಳಲಾಗಿದೆ.

ಪೋಲೀಸರು ಗುಂಡು ಹಾರಿಸಿದರು

ರಾಣಿಬೆನ್ನೂರಿನಲ್ಲಿ ಹಿಂದೂ-ಮುಸ್ಲಿಂ ಘರ್ಷಣೆ

ಭಾರತ ರಾಷ್ಟ್ರೀಯ ವೀರರ ಗೌರವಾರ್ಥವಾಗಿ ಹೊರಟ ಮೆರವಣಿಗೆಯು ಮಸೀದಿಯನ್ನು ದಾಟುತ್ತಿದ್ದ ಸಂದರ್ಭದಲ್ಲಿ ಹಲವು ಮುಸ್ಲಿಂರು ಮೆರವಣಿಗೆಯ ಮೇಲೆ ಬಿದ್ದರು. ಗಲಾಟೆ ಪ್ರಬಲಿಸಿದ ಪ್ರಯುಕ್ತ ಪೋಲಿಸರು ಎಂಡು ಭಾರಿ ಗುಂಡು ಹಾರಿಸಿದರು. ನಾಲ್ಕು ಮಂದಿಗಳೂ ಅನೇಕರಿಗೆ ಗಾಯವೂ ಸಂಭವಿಸಿದೆ. ಪುಂಡರು ಕಟ್ಟಡಗಳಿಗೆ ಬೆಂಕಿ ಹಚ್ಚಿದರಂತೆ. ಸಿನಿಮಾ ಗೃಹ ಸಂಪೂರ್ಣ ಬೂದಿಯಾಗಿದೆ. ಈ ಸಂದರ್ಭದಲ್ಲಿ ಆದ ದಸ್ತಗಿರಿ 25. ಇದು ಮೊನ್ನೆಯ ದಿನವಸ ಧಾರವಾಡ ಜಿಲ್ಲೆ ರಾಣಿಬೆನ್ನೂರಿನಲ್ಲಿ ಸಡೆಯಿತು.

ಜಯಪುರದಿಂದ ಗಡೀಪಾರ್

ಶ್ರೀ ರಘುವರದಯಾಳ್ ವೇಲೆ ಜೈಪುರದಿಂದ ಗಡೀಪಾರಾಗಬೇಕೆಂಬ ಅನುಜ್ಞೆಯು ಹೊರಟ ಪ್ರಯುಕ್ತ ಅವರು ಆ ಸ್ಥಳವನ್ನು 7 ನೆ ತಾರೀಖಿನ ದಿನ ಬಿಟ್ಟರು. ಆವರು ಅಖಿಲ ಭಾರತ ಸಂಸ್ಥಾನಗಳ ಪ್ರಜಾಪರಿಷತ್ತಿನ ಜನರಲ್ ಕೌನ್ಸಿಲಿನ ಸದಸ್ಯರು.

ಟ್ಯಾಕ್ಸಿ ಮುಷ್ಕರ ತಪ್ಪಿತು

ಬೊಂಬಾಯಿನಲ್ಲಿ ಟ್ಯಾಕ್ಸಿಗಳಿಗೆ ಕೊಡುತ್ತಿರುವ ಪೆಟ್ರೋಲು ಕಡಮೆಯೆಂದು ತಾ || 10 ರಿಂದ ಮುಷ್ಕರ ಪ್ರಾರಂಭಿಸಬೇಕೆಂದಿದ್ದರು; ಆದರೆ ಅಧಿಕಾರಿಗಳು ಹೆಚ್ಚು ಪೆಟ್ರೋಲನ್ನು ಕೊಡಲು ಸಮ್ಮತಿಸಿದ್ದರಿಂದ ಇದು ತಪ್ಪಿತು.

ಅರಬ್ಬೀ-ಯೆಹೂದಿ ಪ್ರಕರಣ

ಜರೂಸೆಲಂ ಜ 8— ಪ್ಯಾಲಿಸ್ಟೈನಿನ ವಿಚಾರಣಾ ಸಮಿತಿಯು ಕಾರ್ಯಾರಂಭ ಮಾಡಿದೆ. — ಜರೂಸೆಲಂ ಬೀದಿಗಳ ಮೇಲೆಲ್ಲಾ 'ಯಹೂದಿಗಳಿಗೆ ಸ್ಥಿಂಸ್ವತ್ತುಗಳನ್ನು ಮಾರುವ ಅರಬ್ ದ್ರೋಹಿಗಳಿಗೆಲ್ಲಾ ಸಾವು' ಎಂದು 'ರಕ್ತಸಂಸ್ಥೆಯವರು' ಅಂಟಿಸಿದರೆ.

ಬೋಸರ ನಿಧನ ಖಂಡಿತವೇ

ಕಲ್ಕತ್ತಾ ಜ 8— ಐ. ಎಕ್. ಎಸ್ ಟೋಕಿಯೋ ಡೆಪ್ಯೂಟಿಗಳು ಈ ವಾರ ಕಲ್ಕತ್ತಾಕ್ಕೆ ವಾಪಸ್ ಬರಲಿದ್ದಾರೆಂದೂ ಅವರು ಶ್ರೀ ಸುಭಾಷ್ ಬೋಸರ ಸ್ಮಶಾನಯಾತ್ರೆಯಲ್ಲಿ ಭಾಗವಹಿಸಿದ್ದಾಗಿ ಹೇಳಿದರಿಂದಲೂ ಪ್ರಕಟವಾಗಿದೆ.

೧೦೦೦ ಮೈಲಿ ನಡೆದುಬಂದರು

ಆಗ್ನೇಯ ಏಷ್ಯಾದಲ್ಲಿ ಆಜಾದ್ ಹಿಂದ್ ಚಳುವಳಿಯಲ್ಲಿ ಭಾಗವಹಿಸಿದ್ದ ಇಬ್ಬರು ಪತ್ರಿಕೋದ್ಯೋಗಿಗಳು ಬ್ಯಾಂಕಾಕಿನಿಂದ ಇಂಫಾಲಿಗೆ 1000 ಮೈಲಿ ನಡೆದುಕೊಂಡು ಬಂದರು. ಈಗ ದೆಹಲಿಗೆ ಹೊರಟಿದ್ದಾರೆ.

ಪ್ರೆಸ್ ಕೆಲಸಗಾರರ ಮುಷ್ಕರ

ಕಟಕ್ ಜ 7— ಕಟಕ್ಕಿನ 15 ಪ್ರಮುಖ ಮುದ್ರಣಾಲಯಗಳ ಕೆಲಸಗಾರರು ಮುಷ್ಕರ ಹಿಡಿದಿರುವರು. ಇದು ಇಲ್ಲಿಯ ದಿನ ಪತ್ರಿಕೆಗಳಿಗೂ ಭಂಗ ತಂದಿದೆ. ಇದನ್ನು ಬಗೆಹರಿಸಲು ಡಿ || ಮ್ಯಾಜಿಸ್ಟ್ರೇಟರು ಪ್ರಯತ್ನಿಸುತ್ತಿದಾರೆ

ವಾರ್ತಾತರಂಗ

ಅಮೇರಿಕಾದ ಸಾಮಾನು ಸಾಗಿಸುವ ವಿಮಾನಗಳು ನ್ಯೂಯಾರ್ಕಿನಿಂದ ಭಾರತಕ್ಕೆ ಬರುವಾಗ ಪ್ಯೇಗಿನಲ್ಲಿ ಸ್ವಲ್ಪ ತಂಗಲು ಜುಗೊಸ್ಲೋವಿಯಾ ಸರಕಾರದೊಡನೆ ಒಪ್ಪಂದವಾಗಿರುವುದು.

ಂ ಂ

ಅಖಿಲ ಭಾರತ ಆಗಾಖಾರ್ ವಜ್ರೋತ್ಸವ ನಿಧಿಯು 65 ಲಕ್ಷ ರೂ. ಸೇರಿರುವುದಾಗಿ ಹೈದರಾಬಾದಿನ ವರ್ತಮಾನ.

ಂ ಂ

'ನಾನು ಮೌಲನಾ ಆಜಾದ್ ಸರ್ದಾರ್ ಪಟೇಲರವರ ಕೈಯಲ್ಲಿಯ ಯಂತ್ರ. ಅವರು ಎಲ್ಲಿಗೆ ಹೋಗಲಿಕ್ಕೆ ಹೇಳಿದರೆ ಅಲ್ಲಿಗೆ ಹೋಗುವುದೇ ನನ್ನ ಕೆಲಸ' ಎಂಬುದಾಗಿ ಪಂಡಿತ ನೆಹರು ಹೇಳಿರುವರು.

ಂ ಂ

ನಡುವಿನ ಸುತ್ತಲೂ 1180 ಬಂಗಾರದ ನಾಣ್ಯಗಳನ್ನು ಕಟ್ಟಿಕೊಂಡು ಸಮುದ್ರದಲ್ಲಿ ಮುಳುಗಿಹೋದ ಅಂಬ್ಬಯವನ ಶವವು ಕಂಚಿ ತೀರದಲ್ಲಿ ಕಾಣಬಂದಿತು.

ಂ ಂ

ಈಜಿಪ್ಟಿನವರು ಬ್ರಿಟೀಷರು ತಮಗೆ ಕೊಡಬೇಕಾಗಿರುವ ಸಾಲದಲ್ಲಿ ಕಡಿಮೆ ಮಾಡಲು ಸಮ್ಮತಿಯನ್ನು ಕೊಡಲಿಲ್ಲ.

ಂ ಂ

ರಂಗೂನಿನಲ್ಲಿ ಇನ್ನೂ 2000 ಮಂದಿ ಐ. ಎಕ್. ಎ. ಜನರು ಇರುವರೆಂದು ಬಿಡಾಗಡೆಯಾಗಿ ಮದರಾಸಿಗೆ ಬಂದಿರುವ ಸೋಲ್ಜರುಗಳು ಹೇಳಿರುತ್ತಾರೆ.

ಕಾಂಗ್ರೆಸ್ ಜಿಟ್ಟರು

ಹಿಸ್ಸಾರಿನ ಬನ್ಸಿಲಾಲ್ ಆಜಾದ್ ಎಂಬ ಕಾಂಗ್ರೆಸ್ ಮುಖಂಡರು ರೆಡಿಕಲ್ ಪಕ್ಷಕ್ಕೆ ಸೇರಿದರು. (ಬೆ)

ಗಾಂಧೀಜೀ ಭೇಟಿಯಿಲ್ಲ

ಗೌಹತಿ, ಜ 10 — ಗಾಂಧೀಜಿಯವರು ಒರಿಸ್ಸಾ ಮತ್ತು ಆಂಧ್ರ ಸ್ವಾತಂತ್ರ್ಯಕ್ಕೆ ಭೇಟಿ ಕೊಡಲು ಸಾಧ್ಯವಿಲ್ಲವೆಂದು ತಿಳಿಸಿರುವರು.

ಪ್ರತಿಬಂಧಕ ವಜಾ

ಕ್ವಿಲಾನ್, ಜ 9 — ಸುಪ್ರಸಿದ್ಧ ಅಡ್ವೊಕೇಟರೂ ಮತ್ತು ಕಾಸನ ಸಭಾ ಕಾಂಗ್ರೆಸ್ ಸದಸ್ಯರು ಆದ ಶ್ರೀ ಉದಯಭಾನು ಮತ್ತು ತಾಂಪಿಯವರ ಮೇಲಿದ್ದ ನಿರ್ಬಂಧಾಜ್ಞೆಯನ್ನು ಜಿಲ್ಲಾಧಿಕಾರಿಗಳು ವಜಾ ಮಾಡಿರುವರು.

ಮರಣ

ಸೂರತ್, ಜ 9 — ನಿನ್ನೆಯ ದಿವಸ ಇಲ್ಲಿ ಸಿಡಿಬಿನಿಂದ 19 ಮಂದಿ ನಿಧನರಾಗಿರುವರು

ಸರ್ ಅಲಗಪ್ಪ ಚೆಟ್ಟಿಯಾರ್

ಎರ್ನಾಕುಲಂ, ಜ 9 — ಸರ್ ಅಲಗಪ್ಪ ಚೆಟ್ಟಿಯಾರರಿಗೆ ಬಿನ್ನವತ್ತಳೆಯನ್ನು ಅರ್ಪಿಸಲು ಪೌರಸಭೆಯವರು ನಿರ್ಣಯಿಸಿರುವರು.

ಆಕಸ್ಮಿಕ ಮರಣ

ಬೊಂಬಾಯಿನಲ್ಲಿ ಒಬ್ಬ ಆಕ್ಸ್‌ಫರ್ಡ್ ಪದವೀಧರನು ನಿದ್ರಾ, ಭಂಗ ನಿರೋಧದ ಔಷಧದ ಸೇವನೆಯಲ್ಲಿ ಸ್ವಲ್ಪ ಪ್ರಮಾಣ ಹೆಚ್ಚಾದ್ದರಿಂದ ಗತಪ್ರಾಣನಾದನೆಂದು ತಿಳಿಯುಬಂದಿದೆ.

At Ranjit

From 11-I-46

Vish Kanya

ಸಾಧನ ಬೋಸ್, ಪೃಥ್ವಿರಾಜ್ ಸುರೇಂದ್ರ ಗಾತ್ರವಹಿಸಿರುವ

ವಿಷಕನ್ಯೆ

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿವಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

ಲಂಡನ್ ಜ 10— ರಷ್ಯಾದ ಬಹು ಗುಟ್ಟಾಗಿ ಇಡಲ್ಪಟ್ಟಿರುವ ಒಂದು ವರ್ತಮಾನವನ್ನು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಿಂದ ಹೊರಪಟ್ಟಿದೆ. ರಷ್ಯಾದಲ್ಲಿ 500 ರಿಂದ 2000 ಮಿಲಿಯ ಪೌಂಡು ಭಂಗಾರವು ಲೇವಣಿ ಇಡಲಾಗಿದೆಯೆಂದೂ, ಜೊತೆಗೆ 19 ಗಣಿಗಳಿಂದ ವರ್ಷಕ್ಕೆ 42 ರಿಂದ 70 ಮಿಲಿಯ ಪೌಂಡು ಭಂಗಾರವನ್ನು ವರ್ಷಕ್ಕೆ ತಯಾರಿಸುತ್ತಿರುವರೆಂದೂ ಹೇಳಲಾಗಿದೆ.

ಕಡೂರು ಜಿಲ್ಲೆಯಲ್ಲಿರುವ ಹೋಟಲಿನವರು ದಿನಕ್ಕೆ ಒಂದು ಸಿಹಿ ಪದಾರ್ಥ ಮಾತ್ರ ತಯಾರ್ಮಾಡಿ ಮಿಕ್ಕ ಸಕ್ಕರೆಯನ್ನು ಒಳ್ಳೇ ಕಾಫಿ ತಯಾರಿಸಲು ಉಪಯೋಗಿಸಬೇಕೆಂದು ಕಡೂರು ಡಿ || ಮ್ಯಾಜಿಸ್ಟ್ರೇಟರು ಒಂದು ಹುಕುಂ ಹೊರಡಿಸಿರುವುದಾಗಿ ತಿಳಿಯಬಂದಿದೆ.

ಮಾಸ್ಕೋ ಒಪ್ಪಂದದಲ್ಲಿ ಅಣುಶಕ್ತಿ ವಿನಿಯೋಗದ ಬಗ್ಗೆ ಇರುವ ಬರವಣಿಗೆಯ ವಿವರಣೆ ವಿಷಯದಲ್ಲಿ ತೀವ್ರ ಭೇಧ ಉಂಟಾಗಿದ್ದು, ಈ ಬಗ್ಗೆ ಮಾಲ್ಟಾವೊಂರವರು ಲಂಡನ್ನಿಗೆ ಹೋಗಬಹುದೆಂದು ಹೇಳಲಾಗಿದೆ.

ಡೆಲ್ಲೀ ಕೆಂಪು ಕೋಟೆಗೆ 300 ಮಂದಿ ಐ. ಎಕ್. ಎ. ಸಿಪ್ರೀಯರನ್ನು ತರಲಾಗಿದೆ.

ತಾ || 10 ರಲ್ಲಿ ಬ್ರಿಟಿಷ್ ಪಾರ್ಲಿಮೆಂಟರಿ ರಾಯಭಾರಿಯವರು ಸಂ || ನೆಹರೂರನ್ನು ಭೇಟಿ ಮಾಡಿ, 2 ಗಂಟೆಗಳ ಕಾಲ ವಿವಿಧ ವಿಚಾರದಲ್ಲಿ ಚರ್ಚೆ ನಡೆಸಿದರು. ಮಿಸೆಸ್ ನಿಕೋಲರು ಪಂಡಿತಜೀಯನ್ನು ಸ್ತುತಿಸಿ, ತಾನು ಒಬ್ಬ ಆತ್ಮೀಯ ಸ್ನೇಹಿತನನ್ನೇ ಕಂಡೆನೆಂದರು.

ಆಲ್ಬೇನಿಯಾದಲ್ಲಿ ಪ್ರಜಾಪ್ರಭುತ್ವ !

' ಹಾಗೆ ಆಗಬಹುದೆಂಬ ನೀರಿಕ್ಷಣೆಯಿದ್ದಿತು '

ಜಾಗ

ಲಂಡನ್, ಜ.11:— ಆಲ್ಬೇನಿಯಾ ರಚನಾತ್ಮಕ ಪ್ರತಿನಿಧಿ ಸಭೆಯು ಆಲ್ಬೇನಿಯಾವು ಪ್ರಜಾಸ್ವಭುತ್ವನೆಂದು ತೀರ್ಮಾನಿಸಿರುವುದಾಗಿ ಟಿರಾನ ರೇಡಿಯೋವು ಆ ದಿವಸ ತಿಳಿಸಿದೆ

ದ್ವಿತೀಯಾ ಸಮೋವೇಶವಲ್ಲಿಯೆ ನೂತನಾಧಿಕಾರಿಗಳ ಜುನಾವಣೆ ಯಾಗಿರುವುದಾಗಿ ತಿಳಿಯುಬರುವೆ. ಪ್ರಜಾಪ್ರಭುತ್ವ ಪ್ರಸಿದ್ಧವಾದ ಸಂತೋ ಷಾರ್ಥವಾಗಿ ನೂರೊಂದು ಗುಂಡು ಹಾರಿಸಲಾಯಿತು. ಲಂಡನ್ನಿನಲ್ಲಿರುವ ಆ ಲ್ಬೇನಿಯಾ ರಾಜ ಜಾಗಿಗೆ ತಿಳಿಸಲು ' ನನ್ನ ನಿರೀಕ್ಷಣೆಯಲ್ಲಿತ್ತು ' ಎಂಬುದಾ ಗಿ ಹೇಳಿದನು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧನ —

ಮೈಸೂರು ಸಾಬೂನನ್ನು ಉಪಯೋಗಿಸುವ ಹೊರತು, ಅಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿದುಬಂದಿರಿ:

ಈ ಸಾಬೂನನ್ನು ಇನ್ನೆಷ್ಟು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ವೆಂಗಾಗುವಿರಿ.

ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇ ರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾ ತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಟಿಕ್ಕ ಚಿ ಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘ ವಾಡ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿ ಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸ್ವಾಭಾ ರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿನ್ನಲ್ಲಿ ನಂಬಿಕೆಯನ್ನುಂ ಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸು ವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂ ಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾ ತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್ ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

At Opera— 4 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ — ಕಣ್ಣಾಂಬಾ

ಪಾತ್ರಪರಿಸರಿಪ

ಅಶೋಕ ಕುಮಾರ (ತಮಿಳು)

ಹಸಿ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ಗಾವಂಡೂರ್ ವೀರಶೆಟ್ಟಿ & ಸನ್ಸ್

ತಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing

L. N. Press

Sriramp st MYSORE

ರಕ್ತವೃದ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಬೆಲೆ ಡಬ್ಬಿಗೆ ಒಂದು ರೂಪಾಯಿ. ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜೇಶ್ವರಂ, ಮೈಸೂರು